ಪ್ರಿಯ ಪಾಂಶುಪಾಲರೆ/ಶಿಕ್ಷಕರೆ,

ನಾನು ರಾಜಶ್ರೀ ಶ್ರೀನಿವಾಸನ್, ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಯ ಸ್ಕೂಲ್ ಆಫ್ ಎಜುಕೇಶನ್ ನ ಅಧ್ಯಾಪಕವರ್ಗದ ಸದಸ್ಯೆ ಮತ್ತು TeachTE ಎಂಬ ಕಾರ್ಯಯೋಜನೆಯ ಸಂಚಾಲಕಿಯಾಗಿದ್ದೇನೆ. ಶಿಕ್ಷಕ ಶಿಕ್ಷಣ ಕ್ಷೇತ್ರದಲ್ಲಿ ಸಂಶೋಧನೆ, ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳು ಹಾಗೂ ಶಿಕ್ಷಕ ಶಿಕ್ಷಣಕ್ಕೆ ಅಗತ್ಯವಿರುವ ಕಲಿಕಾ ಸಾಮಗ್ರಿಗಳ ಅಭಿವೃದ್ಧಿಗಾಗಿ ಕೊಡುಗೆ ನೀಡುವುದು ಈ ಯೋಜನೆಯ ಗುರಿಯಾಗಿದೆ. ಈ ಯೋಜನೆಯ ಅಂಗವಾಗಿ ನಾವು ಶಾಲಾ ಶಿಕ್ಷಕರಿಂದ 'ಶಿಕ್ಷಕರ ದಿನನಿತ್ಯದ ಸಂದಿಗ್ಧತೆಗಳು' ಎಂಬ ವಿಷಯವಾಗಿ ಪರ್ಯಾಲೋಚನಾ/ಚಿಂತನಶೀಲ ಲೇಖನಗಳನ್ನು ಆಹ್ವಾನಿಸುತ್ತಿದ್ದೇವೆ.

ಶಿಕ್ಷಕರು ತಮ್ಮ ದಿನನಿತ್ಯದ ಶಾಲಾ ಜೀವನದಲ್ಲಿ ಶಾಲಾ ಅಭ್ಯಾಸಗಳು, ನೀತಿಗಳು, ಪಠ್ಯಕ್ರಮ, ಬೋಧನಾವಿಧಾನ, ಮೌಲ್ಯಮಾಪನ ಹಾಗೂ ಶಾಲೆಯ ಭೌತಿಕ ಸ್ಥಿತಿ-ಗತಿಗಳಿಗೆ ಸಂಬಂಧಿಸಿದಂತೆ ಹತ್ತು-ಹಲವು ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂಬುದು ಸಾಮಾನ್ಯ ತಿಳಿವಳಿಕೆಯ ಸಂಗತಿಯಾಗಿದೆ. ಈ ನಿರ್ಧಾರಗಳು ಮಕ್ಕಳು, ಸಹೋದ್ಯೋಗಿಗಳು, ಪ್ರಾಂಶುಪಾಲರು, ಆಡಳಿತ ಮಂಡಳಿ, ಸಮುದಾಯ, ಶಿಕ್ಷಕೇತರ ವರ್ಗ ಹಾಗೂ ಪೋಷಕರು ಸೇರಿದಂತೆ ಇತರರೊಂದಿಗಿನ ಶಿಕ್ಷಕರ ಸಂಬಂಧಗಳಿಂದ ಹೊರಹೊಮ್ಮುತ್ತವೆ. ದಿನನಿತ್ಯದ ಪ್ರತಿಯೊಂದು ಸನ್ನಿವೇಶದಲ್ಲೂ ಶಿಕ್ಷಕರು ವಿಚಾರಶೀಲವೂ, ಉದ್ದೇಶಪೂರ್ವಕವೂ ಆದ ಪ್ರತಿಸ್ಪಂದನೆ ಮತ್ತು ಕ್ರಿಯೆಗಳ ಮೂಲಕ ತಮ್ಮನ್ನು ತೊಡಗಿಸಿಕೊಳ್ಳುವುದು ಅಗತ್ಯವಾಗಿರುತ್ತದೆ. ಕೆಲವೊಮ್ಮೆ ಶಿಕ್ಷಕರು ಎದುರಿಸುವ ಸಂಕೀರ್ಣ ಸನ್ನಿವೇಶದಲ್ಲಿ 'ಸರಿಯಾದ ಉತ್ತರ' ದೊರೆಯುವುದಿಲ್ಲ; ಅಷ್ಟೇ ಅಲ್ಲ, ಅವರು, ಕಷ್ಟಕರವಾದ ನೈತಿಕ ಆಯ್ಕೆಗಳನ್ನು ಮಾಡಿಕೊಳ್ಳುವುದು ಅನಿವಾರ್ಯವಾಗುತ್ತದೆ. ಹೀಗಾಗಿ, ಶಿಕ್ಷಕ ವೃತ್ತಿಯಲ್ಲಿ ಸಂದಿಗ್ಧತೆಗಳು ಅಂತರ್ಗತವಾಗಿದ್ದು ಶಿಕ್ಷಕರ ವೃತ್ತಿಪರ ಜೀವನದುದ್ದಕ್ಕೂ ಸಂದಿಗ್ಧ ಪರಿಸ್ಥಿತಿಗಳು ತಲೆದೋರುತ್ತಲೇ ಇರುತ್ತವೆ.

ಆಯ್ಕೆಗಳನ್ನು ಮಾಡಬೇಕಾದ ಸಂದರ್ಭದಲ್ಲಿ ಸಂದಿಗ್ಧತೆ ತಲೆದೋರುತ್ತದೆ; ಪರಸ್ಪರ ವೈರುಧ್ಯಮಯ ನಿರೀಕ್ಷೆಗಳು, ತಿಕ್ಕಾಟವಿರುವ ಮೌಲ್ಯಗಳು ಅಥವಾ ಎರಡು ವಿಭಿನ್ನ ಮಾರ್ಗಗಳ ನಡುವೆ ಒಂದನ್ನು ಆಯ್ಕೆ ಮಾಡಿಕೊಳ್ಳಬೇಕಾದ ಸನ್ನಿವೇಶಗಳಿರುತ್ತವೆ. ಉದಾಹರಣೆಗೆ, ಮೌಲ್ಯಮಾಪನ ಮಾಡುವ ಸಂದರ್ಭದಲ್ಲಿ ವಿದ್ಯಾರ್ಥಿಗಳ ಸಾಧನೆಯನ್ನು ಅಳೆಯಬೇಕೋ ಅಥವಾ ಅವರ ಪ್ರಯತ್ನವನ್ನು ಅಳೆಯಬೇಕೋ ಎಂಬ ಕುರಿತು ಇರುವ ಸಂದಿಗ್ಧತೆ ಹಿಂದಿನಿಂದಲೂ ಇರುವಂಥದ್ದು. ಸಂದಿಗ್ಧತೆ ಎಂದರೆ 'ಪರಿಹರಿಸಬಹುದಾದ' ಕಷ್ಟಕರ ಸನ್ನಿವೇಶ ಅಥವಾ ಸಮಸ್ಯೆಯಲ್ಲ. ಸಂದಿಗ್ಧತೆಯ ಸನ್ನಿವೇಶದಲ್ಲಿ ಪರ್ಯಾಯ ಮಾರ್ಗಗಳು ತಲೆದೋರಿ, ಒಂದನ್ನು ಆರಿಸಿಕೊಂಡಾಗ ಲಾಭ ಮತ್ತು ನಷ್ಟಗಳೆರಡೂ ಜೊತೆಯಾಗೇ ಬರುತ್ತವೆ. ಕೆಲವೊಮ್ಮೆ ಎದುರಾಗುವ ಎರಡೂ ಆಯ್ಕೆಗಳು ಅನುಕೂಲಕರವಾಗಿ ಇರುವುದಿಲ್ಲ. ಕೆಲವು ಆಯ್ಕೆಗಳನ್ನು ಮಾಡಿದುದರ ಪರಿಣಾಮವಾಗಿ ತಲೆದೋರುವ ಸನ್ನಿವೇಶವು ನಮ್ಮ ನೆಮ್ಮದಿಗೆಡಿಸಿ, ಸಂದೇಹಕ್ಕೀಡಾಗುವಂತೆ ಮಾಡಬಹುದು. ನಾವು ಆ ಆಯ್ಕೆಗಳೊಂದಿಗೆ ಬದುಕಲೂ ಕಲಿಯಬಹುದು. ಆದರೂ, ನಮ್ಮ ಉದ್ದೇಶ, ಸಂದರ್ಭ ಮತ್ತು ಸನ್ನಿವೇಶಕ್ಕೆ ತಕ್ಕಂತೆ ನಾವು ತೋರಿದ ಪ್ರತಿಸ್ಪಂದನೆಗಳ ಬೆಳಕಿನಲ್ಲಿ ಯೋಚಿಸಿ, ತರ್ಕಿಸಿ, ವಿಶ್ಲೇಷಿಸಿ ಕ್ರಿಯಾಶೀಲರಾಗಿ ಮುನ್ನಡೆಯುತ್ತಿರುತ್ತೇವೆ. ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸುವಾಗ ನಡೆಯುವ ಈ ಪರ್ಯಾಲೋಚನಾ ಪ್ರಕ್ರಿಯೆಗಳು ಶಿಕ್ಷಕರಿಗೆ ತಮ್ಮ ಬೋಧನೆಯನ್ನು ಕುರಿತ ಒಳನೋಟಗಳನ್ನು ಒದಗಿಸಿ, ತಮ್ಮ ವೃತ್ತಿಪರ ಆಚರಣೆಗಳ ಬಗ್ಗೆ ವಿಮರ್ಶಾತ್ಮಕ

ದೃಷ್ಟಿಕೋನಗಳನ್ನು ಬೆಳೆಸಿಕೊಳ್ಳಲು ನೆರವಾಗುತ್ತವೆ. ಇದು ಶಿಕ್ಷಕರಿಗೆ ತಮ್ಮ ಆಚರಣೆಗಳನ್ನು ನವೀಕರಿಸಿಕೊಂಡು, ಪುನರ್ರೂಪಿಸಿಕೊಳ್ಳಲು ಚಿಂತನಶೀಲ ಬೋಧನೆಯ ಕ್ಷಣಗಳನ್ನು ದೊರಕಿಸಿಕೊಡುತ್ತದೆ.

ಶಿಕ್ಷಕರು ತಾವು ಶಾಲೆಯಲ್ಲಿ ಮಕ್ಕಳು, ಸಹೋದ್ಯೋಗಿಗಳು, ಪ್ರಾಂಶುಪಾಲರು, ಆಡಳಿತಗಾರರು, ಪೋಷಕರು, ರಾಜ್ಯ ಸರ್ಕಾರ ಇಲ್ಲವೆ ಬೋಧನೆಗೆ ಸಂಬಂಧಿಸಿದಂತೆ ಖಾಸಗಿ ಸಂಘ-ಸಂಸ್ಥೆಗಳೊಂದಿಗೆ ಅಥವಾ ಶಾಲಾವ್ಯವಸ್ಥೆಯ ಭಾಗವಾಗಿರುವ ಇನ್ನಾವುದೇ ಪಾಲುಗಾರರೊಂದಿಗೆ ಎದುರಿಸಿದ ಸಂದಿಗ್ಧತೆಯ ವಿಷಯವಾಗಿ ಪುಟ್ಟ ಲೇಖನವೊಂದನ್ನು ಬರೆದು ಕಳುಹಿಸುವಂತೆ ಈ ಮೂಲಕ ಕೋರುತ್ತಿದ್ದೇವೆ. *ಶಿಕ್ಷಕರ ದಿನನಿತ್ಯದ ಸಂದಿಗ್ಧತೆಗಳು* ವಿಷಯವಾಗಿ ಲಘುಲೇಖನಗಳಿಗಾಗಿ ಆಹ್ವಾನ ನೀಡುತ್ತಿರುವುದರ ಹಿಂದೆ ಎರಡು ಉದ್ದೇಶಗಳಿವೆ:

1. ನಿಮ್ಮ ವೃತ್ತಿಪರ ಅಭಿವೃದ್ಧಿಗೆ ಒಂದು ಅವಕಾಶವನ್ನು ಒದಗಿಸಿ ನಿಮ್ಮ ನಂಬಿಕೆ, ಅಭ್ಯಾಸ, ಪರ್ಯಾಲೋಚನೆ ಹಾಗೂ ಅನುಭವಗಳನ್ನು ಕಲೆಹಾಕಿ ಬರವಣಿಗೆಯ ರೂಪದಲ್ಲಿ ತರಲು ನಿಮಗೆ ಒಂದು ಸಾಂದರ್ಭಿಕ ಹಿನ್ನೆಲೆಯನ್ನು ನೀಡುವುದು.

2. ಶಿಕ್ಷಕರಾಗಿ ನಿಮ್ಮ ಅನುಭವಗಳನ್ನು ಹಂಚಿಕೊಳ್ಳುವುದರಿಂದ ತರಗತಿಗಳ ವಾಸ್ತವ ಸ್ಥಿತಿಗತಿಗಳನ್ನು ಬಿಂಬಿಸುತ್ತದಲ್ಲದೆ, ಸೇವಾನಿರತ ಶಿಕ್ಷಕರ ಅಭಿವೃದ್ಧಿ ಕಾರ್ಯಕ್ರಮ, ಶಿಕ್ಷಕರ ಸಿದ್ಧತಾ ಕಾರ್ಯಕ್ರಮ, ಎಂ.ಎ. ಶಿಕ್ಷಣ ಕಾರ್ಯಕ್ರಮಗಳಿಗೆ ಹಾಗೂ ಇತರ ಶೈಕ್ಷಣಿಕ ವೃತ್ತಿಪರರು ಬಳಸಬಹುದಾದ ಸಮೃದ್ಧ ಕಲಿಕಾ ಸಾಮಗ್ರಿಗಳಾಗಿ ಒದಗಿಬರುತ್ತವೆ. ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಯು ಈ ಲೇಖನಗಳ ಸಂಕಲವನ್ನು ಪುಸ್ತಕರೂಪದಲ್ಲಿ ಪ್ರಕಟಿಸುವುದು.

ಈ ಪರ್ಯಾಲೋಚನಾ ಪಯಣದಲ್ಲಿ ನೀವು ಭಾಗಿಯಾಗಿ ನಿಮ್ಮ ಕಲಿಕೆ ಮತ್ತು ಅನುಭವಗಳನ್ನು ನಮ್ಮೊಡನೆ ಹಂಚಿಕೊಳ್ಳಲು ಈ ಮೂಲಕ ಆಹ್ವಾನಿಸುತ್ತಿದ್ದೇವೆ. ನಿಮ್ಮ ಲೇಖನವನ್ನು ಬರೆಯಬೇಕಿರುವ ಮಾದರಿ ನಮೂನೆಯನ್ನು ಒಳಗೊಂಡಂತೆ ಎಲ್ಲ ವಿವರಗಳಿಗಾಗಿ, ಅನುಬಂಧ I ನ್ನು ನೋಡಿ.

ಈ ಕುರಿತು ಯಾವುದೇ ಸ್ಪಷ್ಟೀಕರಣದ ಅಗತ್ಯವಿದ್ದಲ್ಲಿ ದಯಮಾಡಿ ನಮನ್ನು teachte@apu.edu.in ಮಿಂಚಂಚೆ ಮೂಲಕ ಸಂಪರ್ಕಿಸಬಹುದು ಅಥವಾ ಶ್ರೀ. ಮೊಹಮದ್ ಹಸನ್ ಮೊಂಡಲ್, ಸಹಾಯಕ ಸಂಶೋಧಕರು, TeachTE ಕಾರ್ಯಯೋಜನೆ, ಸ್ಕೂಲ್ ಆಫ್ ಎಜುಕೇಶನ್, ಅಜೀಂ ಪ್ರೇಮ್ ಜಿ ಯೂನಿವರ್ಸಿಟಿ, ಬೆಂಗಳೂರು, ಇವರನ್ನು ಸಂಪರ್ಕಿಸಬಹುದು. ಮೊಬೈಲ್ ಕರೆಗಾಗಿ ಸಂಪರ್ಕಿಸಿ: 7895091685.

ಧನ್ಯವಾದ!

ವಂದನೆಗಳೊಂದಿಗೆ,

ರಾಜಶ್ರೀ ಶ್ರೀನಿವಾಸನ್
ಪ್ರಾಧ್ಯಾಪಕರು, ಸ್ಕೂಲ್ ಆಫ್ ಎಜುಕೇಶನ್
ಅಜೀಂ ಪ್ರೇಮ್ ಜಿ ಯೂನಿವರ್ಸಿಟಿ, ಬೆಂಗಳೂರು
ಡಿಸೆಂಬರ್ 16, 2022

**<u>ಅನುಬಂಧ - 1</u>**

## ಲೇಖನಗಳಿಗಾಗಿ ಆಹ್ವಾನ

## ಶಿಕ್ಷಕರ ದಿನನಿತ್ಯದ ಸಂದಿಗ್ಧತೆಗಳು

<u>ವಿವರಗಳು</u>

1. ನಿಮ್ಮ ಲೇಖನವು 900-1200 ಪದಗಳೊಳಗೆ ಇರಬೇಕು.
2. ಸಾಧ್ಯವಾದಷ್ಟು ಮಟ್ಟಿಗೆ ನಿಮ್ಮ ಲೇಖನವು ಕೆಳಗಿನ ನಮೂನೆಯಂತೆಯೇ ಇರಲಿ.
3. ಒಂದು ಲೇಖನಕ್ಕೆ ಗರಿಷ್ಠ ಮೂರು ಶಿಕ್ಷಕರು ಲೇಖಕರಾಗಿರಬಹುದು.
4. ಪೂರ್ವಪ್ರಾಥಮಿಕ, ಪ್ರಾಥಮಿಕ, ಹಿರಿಯ ಪ್ರಾಥಮಿಕ, ಪ್ರೌಢ ಮತ್ತು ಪದವಿ ಪೂರ್ವ ಹಂತದ ಶಾಲೆಗಳಲ್ಲಿ ಸದ್ಯ ಕಾರ್ಯನಿರ್ವಹಿಸುತ್ತಿರುವ ಸರ್ಕಾರಿ, ಖಾಸಗಿ, ಅನುದಾನಿತ ಹಾಗೂ ಅಂತರರಾಷ್ಟ್ರೀಯ ಶಾಲೆಗಳ ಶಿಕ್ಷಕರು ಲೇಖನಗಳನ್ನು ಸಲ್ಲಿಸಬಹುದು. ವಿಶೇಷ ಮಕ್ಕಳಿಗಾಗಿ ಇರುವ ಶಾಲೆ/ಕಲಿಕಾ ಕೇಂದ್ರಗಳಲ್ಲಿ ಕೆಲಸ ಮಾಡುತ್ತಿರುವ ಶಿಕ್ಷಕರೂ ತಮ್ಮ ಸಂದಿಗ್ಧತೆಗಳನ್ನು ಕುರಿತು ಬರೆಯಲು ಪ್ರೋತ್ಸಾಹಿಸಲಾಗಿದೆ.
5. ಲೇಖನಗಳು ಆಂಗ್ಲಭಾಷೆ ಅಥವಾ ಇನ್ನಾವುದೇ ಭಾರತೀಯ ಭಾಷೆಯಲ್ಲಿ ಇರಬಹುದು.
6. ಲೇಖನಗಳನ್ನು ಪರಿಶೀಲನಾ ಪ್ರಕ್ರಿಯೆಗೆ ಒಳಪಡಿಸಲಾಗುತ್ತದೆ. ಆಯ್ಕೆಯಾದ ಲೇಖನಗಳ ಲೇಖಕರನ್ನು ನಮ್ಮ ವಿಶ್ವವಿದ್ಯಾಲಯದಲ್ಲಿ ನಡೆಯುವ ಸಮ್ಮೇಳನದಲ್ಲಿ ಪ್ರಸ್ತುತಪಡಿಸಲು ಆಹ್ವಾನಿಸಲಾಗುತ್ತದೆ.
7. ಲೇಖನಗಳನ್ನು ಬರೆಯಲು ಯಾವುದೇ ಸಂಭಾವನೆಯನ್ನು ನೀಡಲಾಗುವುದಿಲ್ಲ.
8. ಲೇಖನಗಳ ಸಂಕಲನವನ್ನು ಅಂತಿಮವಾಗಿ ಪುಸ್ತಕರೂಪದಲ್ಲಿ ಹೊರತರಲಾಗುತ್ತದೆ. ಪ್ರತಿ ಲೇಖಕರಿಗೂ ಪುಸ್ತಕದ ಒಂದು ಪ್ರತಿಯನ್ನು ನೀಡಲಾಗುತ್ತದೆ.
9. ಶಿಕ್ಷಕರು ವೈಯಕ್ತಿಕವಾಗಿ ಬರೆಯಬಹುದು. ಲೇಖನಗಳಲ್ಲಿ ಶಿಕ್ಷಕರ ಹೆಸರುಗಳನ್ನು ನಮೂದಿಸಲಾಗುತ್ತದೆ. ನೀವು ನಿಮ್ಮ ಶಾಲೆಯ ಹೆಸರನ್ನು ಲೇಖನದಲ್ಲಿ ಸೇರಿಸಲು ಬಯಸಿದರೆ ನಿಮ್ಮ ಶಾಲೆಯಿಂದ ಅಗತ್ಯ ಅನುಮತಿಯನ್ನು ಪಡೆದು, ಒಪ್ಪಿಗೆ ಪತ್ರವೊಂದಕ್ಕೆ ಸಹಿ ಹಾಕಬೇಕಾಗುತ್ತದೆ.
10. ಶಾಲೆಗಳ ಮೂಲಕ ತಮ್ಮ ಲೇಖನಗಳನ್ನು ಕಳುಹಿಸಿಕೊಡುವ ಲೇಖಕರು ಸಹ ಅನುಮತಿ ಪತ್ರಗಳಿಗೆ ಸಹಿ ಹಾಕಬೇಕಾಗುತ್ತದೆ. ತಮ್ಮ ಸಂದಿಗ್ಧತೆಗಳನ್ನು ಹಂಚಿಕೊಳ್ಳುತ್ತಲೇ ತಮ್ಮ ಗುರುತನ್ನು ಅಂತಿಮ ಪ್ರಕಟಣೆಯ ವೇಳೆ ಬಹಿರಂಗಪಡಿಸಲು ಇಚ್ಛಿಸದ ಲೇಖಕರು ಕೂಡ ಲೇಖನಗಳನ್ನು ಕಳುಹಿಸಿಕೊಡಲು ಈ ಮೂಲಕ ಪ್ರೋತ್ಸಾಹಿಸುತ್ತಿದ್ದೇವೆ.
11. 2017ರಿಂದ ಇಲ್ಲಿಯವರೆಗೂ, ಕನಿಷ್ಠ ಎರಡು ವರ್ಷಗಳ ಕಾಲ ನಿಯತವಾಗಿ ಶಾಲಾ ಬೋಧನೆಯಲ್ಲಿ ತೊಡಗಿರುವ ವಿವಿಧ ಫೌಂಡೇಷನ್ ಗಳ ಫೆಲೋ ಗಳಿಗೂ ಲೇಖನಗಳನ್ನು ಕಳುಹಿಸಲು ಮುಕ್ತ ಅವಕಾಶವಿದೆ. 2017ರಿಂದ ಇಲ್ಲಿಯವರೆಗೂ, ಕನಿಷ್ಠ ಎರಡು ವರ್ಷಗಳ ಕಾಲ ನಿಯತವಾಗಿ ಶಾಲಾ ಬೋಧನೆಯಲ್ಲಿ ತೊಡಗಿರುವ ಅಜೀಂ ಪ್ರೇಮ್ ಜಿ ಯೂನಿವರ್ಸಿಟಿಯ ಹಿರಿಯ ವಿದ್ಯಾರ್ಥಿಗಳು ಸಹ ಲೇಖನಗಳನ್ನು ಕಳುಹಿಸಬಹುದಾಗಿದೆ.
12. ಮನೆಪಾಠ ಹೇಳುವ, ಮನೆಯಲ್ಲಿಯೇ ಶಿಕ್ಷಣ ನೀಡುತ್ತಿರುವ ಹಾಗೂ ಕೋಚಿಂಗ್ ಸೆಂಟರ್ ಗಳ ಶಿಕ್ಷಕರಿಂದ ಲೇಖನಗಳನ್ನು ಆಹ್ವಾನಿಸುತ್ತಿಲ್ಲ.

13. ಲೇಖನಗಳನ್ನು ನಮಗೆ ಕಳುಹಿಸಿಕೊಡಲು ಏಪ್ರಿಲ್ 1, 2023 ಕಡೆಯ ದಿನಾಂಕವಾಗಿದೆ. ಪೂರ್ಣ ಲೇಖನವನ್ನು ಕಳುಹಿಸಬೇಕಾದ ಮಿಂಚಂಚೆ ವಿಳಾಸ: teachte@apu.edu.in

<u>ಮಾದರಿ ನಮೂನೆ</u>

ಶಾಲೆಗಳಲ್ಲಿ ಶಿಕ್ಷಕರು ಹಲವು ರೀತಿಯ ಸಂದಿಗ್ಧ ಪರಿಸ್ಥಿತಿಗಳನ್ನು ಎದುರಿಸುತ್ತಿರುತ್ತಾರೆ. ಅವುಗಳಲ್ಲಿ ಕೆಲವೆಂದರೆ: ಎಲ್ಲ ವಿದ್ಯಾರ್ಥಿಗಳಿಗೂ ಗಮನ ನೀಡಬೇಕೆ ಅಥವಾ ಅಗತ್ಯವಿರುವವರಿಗೆ ಮಾತ್ರವೆ?; ಸಾಧನೆಗೆ ಅಂಕಗಳನ್ನು ನೀಡಬೇಕೆ ಅಥವಾ ಪ್ರಯತ್ನಕ್ಕಾಗಿಯೆ?; ಆಡಳಿತಗಾರರು ತೆಗೆದುಕೊಳ್ಳುವ ನಿರ್ಧಾರಗಳು ಶಿಕ್ಷಕರಿಗೆ ಹೊಂದಿಕೆಯಾಗದ ಸನ್ನಿವೇಶಗಳು; ಸಹಶಿಕ್ಷಕರ ನಡುವೆ ಅಥವಾ ವಿದ್ಯಾರ್ಥಿಗಳ ನಡುವೆ ತಾರತಮ್ಯದಿಂದ ಕೂಡಿರುವ ಶಿಕ್ಷಕರ ವರ್ತನೆಗಳು; ವಿದ್ಯಾರ್ಥಿಗಳನ್ನು ಕುರಿತ ಸಮಸ್ಯೆಗಳನ್ನು ಪೋಷಕರೊಂದಿಗೆ ಹಂಚಿಕೊಳ್ಳುವ ಸಂದರ್ಭಗಳು; ಕೇಂದ್ರೀಕೃತ ಪಠ್ಯಕ್ರಮವನ್ನು ಅನುಸರಿಸಬೇಕೆ ಅಥವಾ ವಿದ್ಯಾರ್ಥಿಗಳ ಸಿದ್ಧತಾ ಹಂತಕ್ಕೆ ತಕ್ಕಂತೆ ಪಾಠಮಾಡಬೇಕೆ? ಸಮಾನತೆಗೆ ಧಕ್ಕೆ ಬಾರದಂತೆ ಸಹಾನುಭೂತಿ ತೋರಬೇಕಾದ ಸನ್ನಿವೇಶಗಳು; ತರಗತಿಗಳಲ್ಲಿ ಶಿಸ್ತಿನ ಪರಿಪಾಲನೆ; ಧಾರ್ಮಿಕ ಮೌಲ್ಯಗಳ ಆಚರಣೆ; ಶಾಲಾ ನಿಯಮಗಳನ್ನು ಪಾಲಿಸಬೇಕೆ ಅಥವಾ ಕಟ್ಟುನಿಟ್ಟಾಗಿರದೆ ನಮ್ಯತೆಯಿಂದಿರುವುದೆ? ತರಗತಿಗಳಲ್ಲಿ ಸಂರಚನೆ ಮತ್ತು ಸ್ವಾಯತ್ತತೆ; ಮೌಲ್ಯಾಚರಣೆಯಲ್ಲಿ ಉದಾರತೆ ಅಥವಾ ಸಾಮಾಜಿಕ/ಸಾಂಸ್ಕೃತಿಕ ಮೌಲ್ಯಗಳಿಗೆ ಆದ್ಯತೆ - ಈ ಪಟ್ಟಿ ಸಮಗ್ರ/ಸಂಪೂರ್ಣವೆಂದೇನಲ್ಲ; ಆದರೆ, ಸಂದಿಗ್ಧತೆಯ ಪರಿಸ್ಥಿತಿಗಳೆಂದರೆ ಏನು ಎಂಬುದರ ಚಿತ್ರಣ ನೀಡಲು ಇದನ್ನು ನೀಡಲಾಗಿದೆಯಷ್ಟೆ. ನೀವು ಶಾಲಾ ಶಿಕ್ಷಕರಾಗಿ ಎದುರಿಸಿರುವ ಯಾವುದಾದರೊಂದು ನಿರ್ದಿಷ್ಟ ಸಂದಿಗ್ಧ ಪರಿಸ್ಥಿತಿಯನ್ನು ಆರಿಸಿಕೊಂಡು ಬರೆಯಬಹುದು.

ಕೆಳಗೆ ಕೊಟ್ಟಿರುವ ಮಾದರಿ ನಮೂನೆಯನ್ನು ಲೇಖನಕ್ಕಾಗಿ ಬಳಸಬಹುದು:

1. ಸಂದಿಗ್ಧತೆಗೆ ಶೀರ್ಷಿಕೆ:

2. ಸಾಂದರ್ಭಿಕ ಹಿನ್ನೆಲೆ/ಸನ್ನಿವೇಶದ ವಿವರ/ ವೈಯಕ್ತಿಕ ವಿವರಗಳು:

i. ಹೆಸರು:
ii. ಲಿಂಗ:
iii. ಶಾಲೆಯ ವಿಧ: ಖಾಸಗಿ/ಸರ್ಕಾರಿ/ಅನುದಾನಿತ
iv. ಸ್ಥಳ: ರಾಜ್ಯ, ಜಿಲ್ಲೆ, ತಾಲೂಕು/ಗ್ರಾಮದ ಹೆಸರನ್ನು ತಿಳಿಸಿ
v. ನೀವು ಬೋಧಿಸುವ ತರಗತಿಗಳು:
vi. ನೀವು ಬೋಧಿಸುವ ವಿಷಯಗಳು:
vii. ನೀವು ಬೋಧಿಸುವ ತರಗತಿ(ಗಳ)ಯಲ್ಲಿನ ಮಕ್ಕಳ ಸಂಖ್ಯೆ:
viii. ಬೋಧನಾ ಅನುಭವದ ಅವಧಿ? ದಯಮಾಡಿ, ವರ್ಷಗಳಲ್ಲಿ ಅವಧಿಯನ್ನು ಸ್ಪಷ್ಟಪಡಿಸಿ.
ix. ವಿದ್ಯಾರ್ಹತೆ:

3. ನೀವು ಎದುರಿಸುತ್ತಿರುವ ಒಂದು ಸಂದಿಗ್ಧ ಪರಿಸ್ಥಿತಿಯನ್ನು ಗುರುತಿಸಿ, ಅದಕ್ಕೆ ಕಾರಣವಾದ ಸನ್ನಿವೇಶ ಹಾಗೂ ನೀವು ಅನುಭವಿಸಿದ ಸಂದಿಗ್ಧತೆಯನ್ನು ನಿರ್ದಿಷ್ಟವಾಗಿ ವಿವರಿಸಿ.

4. ನಿಮ್ಮಲ್ಲಿ ತಲೆದೋರಿದ ಪರಸ್ಪರ ತಿಕ್ಕಾಟದ/ವೈರುಧ್ಯಮಯ ಆಲೋಚನೆ/ಮೌಲ್ಯ/ನಿರೀಕ್ಷೆಗಳು ಯಾವುವು?

5. ನೀವು ತೆಗೆದುಕೊಂಡ ನಿಲುವು/ಕ್ರಮವೇನು?

6. ಅಂತಹ ನಿಲುವನ್ನು ತಾಳಲು ನಿಮಗೆ ಮಾರ್ಗದರ್ಶನ ತೋರಿದ ಅಂಶಗಳಾವುವು?

7. ಸಂದಿಗ್ಧ ಪರಿಸ್ಥಿತಿಯಲ್ಲಿ ನೀವು ಪರಿಗಣಿಸಿದ ಇತರ ಕ್ರಮ/ ನಿಲುವು(ಗಳು) ಯಾವುವು?

8, ನಿಮ್ಮ ಪ್ರತಿಸ್ಪಂದನೆ/ಕ್ರಮ(ಗಳಿ)ಗೆ ಇತರರ ಪ್ರತಿಕ್ರಿಯೆಗಳು ಏನಾಗಿದ್ದವು?

===========